**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 1080/2020

ಸಿ.ಡಬ್ಲೂಃ 5 ಪಿ.ಡಬ್ಲೂಃ 7

ಹೆಸರುಃ ಕವಿತಾ

ತಂದೆಯ ಹೆಸರುಃ ಬಸಪ್ಪ

ವಯಸ್ಸುಃ 27 ವರ್ಷ

ಉದ್ಯೋಗಃ ಮನೆಗೆಲಸ

ವಿಳಾಸಃ ಮುದೇನಗುಡಿ ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 27/06/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

**1.** ಚಾಸಾ–1 ರವರು ನನ್ನ ತಾಯಿ. ಚಾಸಾ–4 ನನ್ನ ತಂದೆಯವರು. ಚಾಸಾ–7 ಮತ್ತು 8 ನಮ್ಮ ಓಣಿಯವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಓಣಿಯವರು. ಸುಮಾರು ಆರೋಪಿತರು 2 ಗುಂಟೆ ಜಾಗವನ್ನು ನಮಗೆ ಮಾರಾಟ ಮಾಡಿರುತ್ತಾರೆ. 2020 ರಲ್ಲಿ ಆರೋಪಿತರು ಸದರಿ ಜಾಗದಲ್ಲಿ ಅಗಿಯನ್ನು ಹಚ್ಚುತ್ತಿದ್ದರು. ಆಗ ನಾವು ಯಾಕೆ ಅಗಿಯನ್ನು ಅಚ್ಚುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಆರೋಪಿತರು ಅದು ನಮ್ಮ ಜಾಗ ನಾವು ಅಗಿಯನ್ನು ಹಚ್ಚುತ್ತೇವೆ ಎಂದು ಹೇಳಿರುತ್ತಾರೆ. 2, 4 ಮತ್ತು 5 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯಲು ಶುರುಮಾಡಿರುತ್ತಾರೆ. ಆ ಸಂಧರ್ಭದಲ್ಲಿ ನಾನು, ಚಾಸಾ–1, 6 ರವರು ಇದ್ದೇವು. ಚಾಸಾ–4 ರವರು ಮನೆಯಲ್ಲಿ ಇದ್ದರು. ನಾವು ಆರೋಪಿತರಿಗೆ ಮತ್ತು ಆರೋಪಿತರು ನಮಗೆ ಬೈಯುವುದನ್ನು ಚಾಸಾ–4 ರವರು ಕೇಳಿಸಿಕೊಂಡು ಬಂದು ನಮಗೆ ಮನೆಯ ಒಳಗಡೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರಿಗೆ ಅವರ ಮನೆಯವರು ಅವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ

ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. ದಿನಾಂಕ 10/06/2020 ರಂದು ಸಾಯಂಕಾಲ 5–30 ಕ್ಕೆ ಸದರಿ ಘಟನೆ ಆಗಿರುತ್ತದೆ ಎಂದರೆ ಸರಿ. ಚಾಸಾ–1 ರವರು ಸದರಿ ಸ್ಥಳದಲ್ಲಿ ಓಡಾಡುತ್ತಿದ್ದಾಗ ಅವರನ್ನು ತಡೆದು ಆರೋಪಿತರು ಎಳೆದಾಡಿ ಅವರಿಗೆ ಬೈದಾಡಿರುತ್ತಾರೆ ಎಂದರೆ ಸರಿ. ಆಗ ಚಾಸಾ–4 ರವರು ಘಟನಾ ಸ್ಥಳಕ್ಕೆ ಬಂದಾಗ ಆರೋಪಿತರು ಬೋಸುಡಿ ಮಗನಾ ಎಂದು ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಂತರ ಚಾಸಾ–4 ರವರು ಸದರಿ ಜಾಗವನ್ನು ತಾನು ಖರೀದಿ ಮಾಡಿಕೊಂಡಿರುತ್ತೇನೆ, ಹಾಗಾಗೀ ನಾನು ಯಾಕೆ ಈ ಜಾಗವನ್ನು ಬಿಡಬೇಕು ಎಂದು ಕೇಳಿದ್ದಕ್ಕೆ ಆರೋಪಿತರು ಚಾಸಾ–4 ರವರಿಗೆ ಸಿಕ್ಕ ಸಿಕ್ಕಲ್ಲಿ ಹೊಡಿ ಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ–1 ರವರು ಆ ಸಂಧರ್ಭದಲ್ಲಿ ಬಿಡಿಸಲು ಹೋದಾಗ ಅವರಿಗೂ ಹೊಡಿ ಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ–6 ರಿಂದ 8 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಚಾಸಾ–1 ಮತ್ತು 4 ರವರಿಗೆ ಆರೋಪಿತರು ಹೊಡೆದ ಏಟಿನಿಂದ ಸಣ್ಣ ಪುಟ್ಟ ಒಳಪೆಟ್ಟು ಆಗಿರುವುದರಿಂದ ಮನೆಯಲ್ಲಿಯೇ ಉಪಚಾರವನ್ನು ಪಡೆದುಕೊಂಡಿರುತ್ತಾರೆ ಎಂದರ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ PKU ವಕೀಲರಿಂದಃ**

ಮುದೇನಗುಡಿಯಲ್ಲಿ ನಮಗೆ ಸೇರಿದ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ. ಮುದೇನಗುಡಿಯಲ್ಲಿ ಆರೋಪಿತರಿಗೆ ಸೇರಿದ 19 ಗುಂಟೆ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಎರಡು ಗುಂಟೆ ಆಸ್ತಿಯನ್ನು ಬಾಂಡ್ ಮೇಲೆ ಬರೆಯಿಸಿ ಖರೀದಿ ಮಾಡಿಕೊಂಡಿರುತ್ತೇವೆ. ಅದಕ್ಕೆ ಸಂಬಂಧಿಸಿದಂತೆ ಖರೀದಿ ಪತ್ರ ಇರುವುದು ನನಗೆ ಗೊತ್ತಿಲ್ಲ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ–1,ಚಾಸಾ–4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾರೆ ಮತ್ತು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–6 ರಿಂದ 8 ರವರು ಜಗಳವನ್ನು ಬಿಡಿಸಿದರು ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ದಿನಾಂಕ 10/06/2020 ರಂದು ತಮ್ಮ ಜಾಗದಲ್ಲಿ ಗಿಡಗಳನ್ನುಹಚ್ಚುತ್ತಿದ್ದಾಗ ವಿನಾಕಾರಣ ನಾವು ಜಗಳ ತೆಗೆದು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದದಾಖಲು

ಮಾಡಿರುತ್ತೇವೆ ಎಂದರೆ ಸರಿಯಲ್ಲ. 4 ನೇ ಆರೋಪಿಯು  ನಮ್ಮ ವಿರುದ್ದ ಇದೇ ನ್ಯಾಯಾಲಯದಲ್ಲಿ ಒಂದು ಕ್ರಿಮಿನಲ್ ಕೇಸ್   ದಾಖಲು ಮಾಡಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ

ನ್ಯಾಯಾಧೀಶರು ರೋಣ .